

ಕಾನನ
ಮಾರ್ಚ್ 2018
ನಿಸರ್ಗದೆಡೆಗೆ ಪಯಣ
WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ




ಮುಖಪುಟ

ಅಂಧಬಾರ್ನ್, ಪುಣೆ

© ಅರವಿಂದ ರಂಗನಾಥ್

ಮಾರ್ಚ್ 2018

WCG
Wildlife Conservation Group



© ಅರವಿಂದ ರಂಗನಾಥ್

## ಲೇಖನಗಳು


* ನೀಲಗಿರಿ ಮಾರ್ಟಿನ್ – ನಾಗೇಶ್ .ಕೆ .ಜಿ

* ಉರಗ ಸಂರಕ್ಷಕನಾಗಿ ನಾನು ಕಲಿತದ್ದು – ಡಾ. ದೀಪಕ್ ಭದ್ರಶೆಟ್ಟಿ

* ದುಂಬಿಗಳ ಬದಲಿಗೆ? – ಜೈಕುಮಾರ್ .ಆರ್

* ಅಡವಿಯಲ್ಲಿ ವಿಶ್ವ ವನ್ಯಜೀವಿ ದಿನಾಚರಣೆ – ಶಂಕರಪ್ಪ .ಕೆ .ಪಿ

* ಛಾಯೆಯ ಮಾಯೆ ಎಂದೇ(ಕವನ) – ಕೃಷ್ಣನಾಯಕ್

* ಪ್ರಕೃತಿ ಬಿಂಬ – ಶಂಕರಪ್ಪ .ಕೆ .ಪಿ



**ವಿನ್ಯಾಸ**
ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**
ಅರವಿಂದ ರಂಗನಾಥ್

**ಪರಿಷ್ಕರಣೆ**
ಮುರಳಿ .ಎಸ್
ಅನನ್ಯರೂಪ

**ಕರಡು ತಿದ್ದುಪಡಿ**
ಡಾ.ದೀಪಕ್ ಭದ್ರಶೆಟ್ಟಿ, ಮೈಸೂರು

# ರಾಮತನ ಚಂಪಕ

**ಸಾಮಾನ್ಯ ಹೆಸರು:** Golden champak or Mickey Mouse Plant

**ವೈಜ್ಞಾನಿಕ ಹೆಸರು:** *Ochna obtusata*



© ಡಬ್ಲ್ಯೂ ಸಿ ಜಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

ಬೆಂಗಳೂರು, ಹಾಸನ, ಕೋಲಾರ, ಮಂಡ್ಯ, ಮೈಸೂರು, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಯ ಶುಷ್ಕಎಲೆ ಉದುರುವ ಕಾಡು ಕಲ್ಲು ಬಂಡೆಗಳ ಆವಾಸಗಳಲ್ಲಿ ಸುಮಾರು 12 ಮೀಟರ್ ಎತ್ತರಕ್ಕೆ ಬೆಳೆಯುವ ಸಣ್ಣ ಮರ ರಾಮತನ ಚಂಪಕ. ಇದು ಸುಂದರವಾದ ಹಳದಿ ಹೂಗಳನ್ನು ಬಿಡುತ್ತದೆ. ಗಾಡ ಕಪ್ಪು ಕಾಯಿಗಳನ್ನು, ಹೊಳೆಯುವ ಎಲೆಗಳನ್ನು ಹೊಂದಿದೆ. ಕೆಂಪು ಬಣ್ಣದ ಬೀಜದ ಬಟ್ಟಲಿನಲ್ಲಿ ಇರುವ ಕಪ್ಪು ಬೀಜವು ನೋಡಲು ಮಿಕ್ಕಿ ಮೌಸ್ ಮುಖವನ್ನು ಓಲುತ್ತದೆ. ಬೀಜದಿಂದ ಮೊಳಕೆಯೊಡೆದ ಗಿಡ ಬಹು ಬೇಗ ಬೆಳೆಯುತ್ತದೆ. ಇದನ್ನು ನಾಟಿ ವೈದ್ಯರು ಔಷಧಿಯಾಗಿ ತಯಾರಿಸಲು ಬಳಸುತ್ತಾರೆ.



# ವನದಾಳದ ಮಾತು



ನಾಗೇಶ್ ಕೆ.ಜಿ ರವರು ಮೂಲತಃ ರಾಮನಗರ ಜಿಲ್ಲೆಯವರು, ಹುಟ್ಟಿ ಬೆಳೆದದ್ದು ಕುರುಚಲು ಕಾಡು ಹಾಗೂ ಜನ ಸಂದಣಿ ಇರುವ ಪ್ರದೇಶದಲ್ಲಿ. ಅರಣ್ಯ ಇಲಾಖೆಯ ಅರಣ್ಯ ರಕ್ಷಕ ಹುದ್ದೆಗೆ ಸೇರಿದ್ದು ಪಶ್ಚಿಮ ಘಟ್ಟಗಳ ಕೊಡಗು ಜಿಲ್ಲೆಯಲ್ಲಿ. “ಕೆಲಸಕ್ಕೆ ಸೇರಿದ ಮೊದಮೊದಲು ಜನರೇ ಇರದ ದಟ್ಟ ಕಾಡನ್ನು ಕಂಡು ಬೇಸರವಾಗುತ್ತಿತ್ತು. ದಿನ ಕಳೆದಂತೆ ಪರಿಸರವನ್ನ, ಅದರಲ್ಲಿನ ಜೀವಗಳನ್ನು ತಿಳಿದುಕೊಳ್ಳಲು ಪ್ರಯತ್ನ ಪಡುತ್ತ ಕಾಡು ತುಂಬಾ ಹತ್ತಿರವಾಯ್ತು” ಎನ್ನುತ್ತಾರೆ ನಾಗೇಶ್ ರವರು. ಐದು ವರ್ಷಗಳಿಂದ ಪಶ್ಚಿಮ ಘಟ್ಟದ ಕಾಡಿನಲ್ಲಿಯೇ ಸೇವೆ ಸಲ್ಲಿಸುತ್ತಿರುವ ಇವರು ಪ್ರಾಣಿ, ಪಕ್ಷಿ, ಚಿಟ್ಟೆ, ಕಪ್ಪೆ , ಹಾವುಗಳ ಬಗ್ಗೆ ವಿಶೇಷ ಒಲವನ್ನು ಹೊಂದಿದ್ದಾರೆ ಹಾಗೂ ಉತ್ತಮ ಛಾಯಾಗ್ರಾಹಕ ಕೂಡ.




## ನೀಲಗಿರಿ ಮಾರ್ಟಿನ್.

ಮಳೆಗಾಲದಲ್ಲಿ ನಿತ್ಯಹರಿದ್ವರ್ಣ ಕಾಡುಗಳ ಜೀವನವನ್ನು ವರ್ಣಿಸಲು ಪದಗಳೇ ಸಾಲದು. ಒಂದು ಕಡೆ ಸಿಕಾಡಗಳ ಮಾರ್ಧನಿ, ಬಿಡದೇ ಸುರಿವ ಮಳೆ, ಸುತ್ತಲೂ ಮಂಜು, ಕಾಡಿನಲ್ಲಿ ಕಾಲಿಟ್ಟರೆ ಜಿಗಣೆ, ಹಗಲಿನಲ್ಲೂ ಕತ್ತಲಿನ ವಾತಾವರಣ ಇದರಲ್ಲೂ ಕಾಡಿನ ಸೊಬಗು ಬಲು ರಮಣೀಯ.

ಜುಲೈ, ಅತಿಹೆಚ್ಚು ಮಳೆ ಬೀಳುವ ತಿಂಗಳು. ಒಂದು ದಿನ ಮಳೆರಾಯ ಸ್ವಲ್ಪ ಬಿಡುವು ನೀಡಿ ಸೂರ್ಯನ ಬೆಳಕು ಕಂಡಿತು. ಗಸ್ತಿಗೆಂದು ನಾನು ನನ್ನ ಸಿಬ್ಬಂದಿ ಸಮವಸ್ತ್ರ ಧರಿಸಿ, ಗಮ್ ಬೂಟ್ ಏರಿಸಿಕೊಂಡು, ಛತ್ರಿ, ಕೈಯಲ್ಲಿ ಡೆಟಾಲ್, ಕಾಚಂಪುಳಿ (ಜಿಗಣೆಯಿಂದ ನಮ್ಮನ್ನು ರಕ್ಷಿಸಲು ಸರಳ ಉಪಾಯ) ತೆಗೆದುಕೊಂಡು ಹೊರಟೆವು. ನನ್ನ ಸಿಬ್ಬಂದಿ ನನಗಿಂತ ಸ್ವಲ್ಪ ಮುಂದೆ ಇದ್ದರು. ದೊಡ್ಡ ಮರದ ಪೊಟರೆಯಲ್ಲಿ ಏನನ್ನೊ ಕಂಡು ಕೂಗಿದರು, ಬೇಗನೆ ಓಡಿ ನೋಡಿದ ನನಗೆ ಆಶ್ಚರ್ಯ, ಒಂದು ಕ್ಷಣ ಅವುಗಳನ್ನು ನೋಡುತ್ತ ನಿಂತೆ. ಇಲಾಖೆ

ಸೇರಿದ 5 ವರ್ಷಗಳಿಂದ ನೋಡಲು ಹಂಬಲಿಸುತ್ತಿದ್ದ ಪ್ರಾಣಿ ಅದು. ಕಣ್ಣ ಮುಂದೆ!! ಅದುವೇ "ಮರನಾಯಿ (ನೀಲಗಿರಿ ಮಾರ್ಟಿನ್)" ತಾರೆ ಮರದ ಪೊಟರೆಯಲ್ಲಿ ಮೂರು ಮರನಾಯಿಗಳು. ಸ್ವಲ್ಪ ಹೊತ್ತಿನಲ್ಲಿ ನಮ್ಮ ಇರುವನ್ನು ಅರಿತ  ಒಂದು ಮರನಾಯಿ ಮರದ ಮೇಲೆ ಏರಿ ಕಣ್ಮರೆಯಾಯಿತು. ಮತ್ತೊಂದು ಅಲ್ಲೆ ಪೊಟರೆಯ ಪಕ್ಕದ ಕೊಂಬೆಯಲ್ಲಿ ನಿಂತರೆ, ಇನ್ನೊಂದು ಪೊಟರೆಯಲ್ಲೇ ಉಳಿಯಿತು. ಆಗ ಪೊಟರೆಯಲ್ಲಿ ಇರುವುದು ಅದರ ಮರಿ ಇರಬಹುದು ಎಂದುಕೊಂಡು ಫೋಟೋ  ತೆಗೆಯಲು ಶುರು ಮಾಡಿದೆ. ಪಕ್ಕದ ಕೊಂಬೆಯಲ್ಲಿ ಇದ್ದ ಮರನಾಯಿ ನಮ್ಮತ್ತಲೇ ದೃಷ್ಟಿ ಹಾಯಿಸಿ, ದಿಟ್ಟಿಸಿ ನೋಡುತ್ತ ಹೆದರಿಸುತ್ತಿತ್ತು.  ಆಗಾಗ ತನ್ನ ಮರಿಯ ಕಡೆ ನೋಡುವುದು ನಮ್ಮನ್ನು ಹೆದರಿಸುವುದು ಮಾಡುತ್ತಾ ಕೊಂಬೆಯ ಮೇಲಿದ್ದ ಮರನಾಯಿ ಮರವನ್ನೇರಿ ಹೋಯಿತು.

ಪೊಟರೆಯಲ್ಲಿ ಇದ್ದ ಮರಿ ಅವಿತುಕೊಂಡಿತು. ಅದನ್ನು ನೋಡಿದ ಖುಷಿಯಲ್ಲಿ ನನ್ನ ಕಾಲನ್ನು ಜಿಗಣೆಗಳಿಗೆ ಬಿಟ್ಟಿದ್ದೆನೇನೋ ಅನ್ನಿಸಿ ಕಾಲುಗಳನ್ನು ನೋಡಿಕೊಂಡರೆ, ಸುಮಾರು ಹದಿನೈದು ಜಿಗಣೆಗಳು ನನ್ನ ಕಾಲನ್ನೇರಿ ರಕ್ತ ಹೀರುವ ಕಾರ್ಯದಲ್ಲಿ ಮಗ್ನವಾಗಿದ್ದವು. ಮರನಾಯಿ ಕಂಡ ಖುಷಿಯಲ್ಲಿ ಜಿಗಣೆಗಳ ದಾಳಿ ಮರೆತು ಮತ್ತೆ ಗಸ್ತು ಶುರು ಮಾಡಿದೆವು, ನನ್ನ ಸಡಗರ ಕಂಡ ನನ್ನ ಸಿಬ್ಬಂದಿಗಳು ಅದರ ಬಗ್ಗೆ ಕೇಳಲು ಶುರು ಮಾಡಿದರು. ಆಗ



ನಾನು ಇವು ನೀಲಗಿರಿ ಮಾರ್ಟಿನ್ (ಮರನಾಯಿ), ಹೆಸರೇ ಹೇಳುವ ಹಾಗೆ ಇದರ ಊಟ, ವಾಸ, ಆಟ ಎಲ್ಲಾ ಮರದ ಮೇಲೆಯೇ, ಅಪರೂಪವಾಗಿ ನೆಲದ ಮೇಲೆ ಓಡಾಡುತ್ತವೆ. ಇವುಗಳು ಅತ್ಯಂತ ರಹಸ್ಯಮಯ ಜೀವಿಗಳು, ಕೇವಲ ದಕ್ಷಿಣ ಭಾರತದ ನೀಲಗಿರಿ ಕಾಡು, ಪಶ್ಚಿಮ ಘಟ್ಟದ ಕೆಲವು ಭಾಗಗಳಲ್ಲಿ ಮಾತ್ರ ಕಾಣಲು ಸಿಗುತ್ತವೆ. ಇವುಗಳ ರಹಸ್ಯ ಜೀವನ ಶೈಲಿಯಿಂದ ಹಾಗೂ ಅತಿ ವಿರಳವಾಗಿ ಕಾಣುವುದರಿಂದ ಇವುಗಳ ಬಗೆಗಿನ ಪೂರ್ಣ ಅಧ್ಯಯನ ಸಾಧ್ಯವಾಗಿಲ್ಲ. ಇಷ್ಟೊಂದು ಅಪರೂಪದ ಪ್ರಾಣಿಯನ್ನು ನೋಡಿದ್ದು ಅಲ್ಲದೇ ಚಿತ್ರ ತೆಗೆಯಲು ಅವಕಾಶ ಸಿಕ್ಕಿದ ಕಾರಣ ಖುಷಿ, ಸಂಭ್ರಮ, ಆಶ್ಚರ್ಯ ಎಲ್ಲಾ ಒಡಗೂಡಿ ನನ್ನ ಮೈ ಕಂಪಿಸುತ್ತಲೇ ಇತ್ತು. ಮರನಾಯಿಗಳು ಉತ್ತರ ಭಾರತದ ಹಿಮಾಲಯದ ತಪ್ಪಲಲ್ಲಿ ಇರುವ ಕಾಡಿನ ಹಳದಿ

ಕುತ್ತಿಗೆಯ ಮಾರ್ಟಿನ್ ಗಳ ಜಾತಿಗೆ ಸೇರುವಂಥವು. ಮರನಾಯಿಗಳು ಸದಾ ಜೋಡಿಯೊಂದಿಗೆ ಅಥವಾ ಗುಂಪಿನೊಂದಿಗೆ ವಾಸ ಮಾಡುತ್ತವೆ. ಬೆಳಕಿನ ಹೊತ್ತಿನಲ್ಲಿ ಶಾಶ್ವತವಲ್ಲದ ತಮ್ಮ ಸೀಮೆಯಲ್ಲಿ ಓಡಾಡುತ್ತಾ ಹಕ್ಕಿ, ಹುಳು ಹುಪ್ಪಟೆಗಳು, ಮಳೆ ಕಾಡಿನ ಸಿಕಾಡ, ಜೇನು ಹಿಡಿದು ಆಹಾರವಾಗಿಸಿಕೊಳ್ಳುತ್ತವೆ. ಯಾವುದೇ ಪ್ರಾಣಿಗೂ (ಮನುಷ್ಯನಿಗೂ) ಹೆದರದೆ ಇರುವ ಧೈರ್ಯವಂತ ಜೀವಿ ಇದು. ಕಾಡಿನ ನಾಶ ಹಾಗೂ ಚರ್ಮದ ಬೇಟೆಯ ಹೊಡೆತಕ್ಕೆ ಸಿಲುಕಿ ಅವನತಿಯ ಅಂಚಿನಲ್ಲಿ ಒಂದಷ್ಟು ಬದುಕುಳಿದಿವೆ. ಕೊನೆಯ ಸಾಲು ಹೇಳಿ ಮುಗಿಸಲು, ಮಾನವರು ನಮ್ಮ ಭವಿಷ್ಯಕ್ಕೇ ಒಡ್ಡಿರುವ ಕೇಡುಗಾಲವ ನೆನೆದು ಎಲ್ಲರಲ್ಲೂ ನೀರವ ಮೌನ, ಗಸ್ತು ಮುಗಿಸಿ ವಾಪಸ್ ಅದೇ ದಾರಿಯಲ್ಲಿ ಮರನಾಯಿ ಗಮನಿಸೋಣ ಎಂದು ಬಂದ ನಮಗೆ ಆ ಪೊಟರೆಯಲ್ಲಿ ಎರಡು ಮರನಾಯಿಗಳು ಆಚೆ ತಲೆ ಹಾಕಿ ನಮ್ಮನ್ನೇ ನೋಡುತ್ತಿರುವುದನ್ನು ಕಂಡೆವು ನಂತರ ಒಂದು ಮರ ಏರಿ ಹೋಯಿತು. ಒಂದು ಮರನಾಯಿ ಪೊಟರೆಯಲ್ಲಿ ಹಾರಾಡುತ್ತಿದ್ದ ಜೇಣುನೋಣಗಳನ್ನು ಹಿಡಿದು ತಿನ್ನುತ್ತಿತ್ತು.

ನಂತರ ಗಸ್ತು ಮುಗಿಸಿ ವಾಪಸ್ ಬಂದೆವು. ಮರುದಿನ ಅದನ್ನು ಗಮನಿಸಲೆಂದು ಹೋಗಿ ನೋಡಿದಾಗ ಸಿಕ್ಕಿದ್ದು ಖಾಲಿ ಪೊಟರೆ ಮಾತ್ರ..! ಆ ದಿನ ಮಾತ್ರ ಅಲ್ಲಿ ಜೇನು ತಿನ್ನಲು ಅಲ್ಲಿಗೆ ಬಂದಿದ್ದವೋ? ಅಥವಾ ಅಲ್ಲೆ ಮರಿ ಮಾಡಿ ವಾಸ್ತವ್ಯ ಹೂಡಿದ್ದವೊ ಎಂಬುದು ಯಕ್ಷ ಪ್ರಶ್ನೆಯಾಗೆ ಉಳಿಯಿತು.



-ನಾಗೇಶ್ ಕೆ.ಜಿ






# ಉರಗ ಸಂರಕ್ಷಕನಾಗಿ ನಾನು ಕಲಿತದ್ದು.

"ಎರಡು ದಿನಗಳ ಹಿಂದೆ ಸಂರಕ್ಷಿಸಿ ತನ್ನ ಬಳಿಯಲ್ಲಿ ಇಟ್ಟುಕೊಂಡಿದ್ದ ಹಾವಿನ ಛಾಯಾಚಿತ್ರಗಳನ್ನು ತೆಗೆಯಲು ಹೋದಾಗ, ಅದೇ ಹಾವು ಕಚ್ಚಿತು, ಅವನ ಸ್ನೇಹಿತರು ಆಸ್ಪತ್ರೆಗೆ ಕರೆದುಕೊಂಡುಹೋದರು ಆದರೆ ಅವನು ಉಳಿಯಲಿಲ್ಲ".

ಕೆಲವು ವರ್ಷಗಳ ಹಿಂದೆ ನಡೆದ ಈ ಸಂಭಾಷಣೆ ನನಗೆ ಚೆನ್ನಾಗಿ ನೆನಪಿದೆ. ಒಬ್ಬ ಉರಗ ಪ್ರೇಮಿ ತನ್ನ ಪ್ರಾಣವನ್ನು ಪಣಕ್ಕಿಟ್ಟು ಹಾವನ್ನು ರಕ್ಷಿಸಿದ, ಆದರೆ ಹಾವು ಅವನನ್ನೇ ಕಚ್ಚಿಕೊಂದಿತು, ಹಾಲೆರೆವ ಕೈಯನ್ನೇ ಕಚ್ಚುವ ಹಾವಿನಂಥವನು ಎನ್ನುವ ನಾಣ್ಣುಡಿ ಹಳ್ಳಿಗಾಡಿನಲ್ಲಿ ಬಳಕೆಯಲ್ಲಿದೆ, ಆದರೆ ಅದು ಸುಳ್ಳು, ಹಾವು ಹಾಲನ್ನು ಕುಡಿಯುವುದೂ ಇಲ್ಲ ಅಲ್ಲದೇ ಮನುಷ್ಯನ ಪ್ರೀತಿಯ ಭಾಷೆ ಹಾವುಗಳಿಗೆ ತಿಳಿಯುವುದೂ ಇಲ್ಲ.

ಇತ್ತೀಚಿನ ದಿನಗಳಲ್ಲಿ "ಉರಗ ಪ್ರೇಮಿ", "ಉರಗ ಸಂರಕ್ಷಕ" ಎಂದು ಕರೆಸಿಕೊಳ್ಳುವ ಹಲವಾರು ಮಂದಿ ಹಾವಿನ ಕಡಿತದಿಂದ ಮರಣವನ್ನಪ್ಪಿದ್ದಾರೆ. ಮನುಷ್ಯ ಸತ್ತಾಗ ಸರೀಸೃಪಗಳನ್ನು ದೋಷಿಯೆಂದು ಪರಿಗಣಿಸುವುದು ಸರ್ವೇ ಸಾಮಾನ್ಯ, ಆದರೆ ಬಹಳಷ್ಟು ಬಾರಿ ಉರಗಪ್ರೇಮಿ ಸಂರಕ್ಷಕ ಎಂದು ಘೋಷಿಸಿಕೊಳ್ಳುವವರ ಅಲಕ್ಷ್ಯ ಹಾಗು ಅತಿಯಾದ ವಿಶ್ವಾಸವೇ ಅವರಿಗೆ ಉಂಟಾಗುವ ಹಾನಿಗಳಿಗೆ ಕಾರಣವೇ ಹೊರತು ಹಾವುಗಳಲ್ಲ. ತನ್ನ ಸಮೀಪಕ್ಕೆ ಬರುವವರನ್ನು ತನ್ನ ಜೀವಕ್ಕೆ ಅಪಾಯವನ್ನುಂಟು ಮಾಡುವವರು ಎಂದು ಹಾವು ಹೆಡೆಯೆತ್ತಿ ಹೊಡೆಯುತ್ತದೆ ಹಾಗು ಕಚ್ಚುತ್ತದೆ.

ನಾನು ಮೊದಲು ಹಾವನ್ನು ಹಿಡಿದಾಗ ನನ್ನ ವಯಸ್ಸು ಬಹುಶಃ ಹತ್ತುವರ್ಷಕ್ಕಿಂತಲೂ ಕಡಿಮೆ ಎನಿಸುತ್ತದೆ. ರಬ್ಬರ್ ಗಿಡಗಳ ಮಧ್ಯೆ ಯಾವ ಜಾತಿಯ ಹಾವನ್ನೋ ಹಿಡಿದಿದ್ದೆ, ವಿಷಯುಕ್ತ ಹಾವೋ ಅಲ್ಲವೋ ತಿಳಿದಿರಲಿಲ್ಲ. ಹಾವನ್ನು ಹತ್ತಿರದಿಂದ ನೋಡಲು ಅದನ್ನು ಒಂದು ಕಡ್ಡಿಯ ಸಹಾಯದಿಂದ ಪ್ಲಾಸ್ಟಿಕ್ ಜಾಡಿಯೊಳಗೆ ಕಳಿಸುತ್ತಿದ್ದೆ. ನಾನು ಈ ಕತೆಯನ್ನು ಹೇಳಲು ಬದುಕುಳಿದಿರುವುದೇ ಅದು ವಿಷಯುಕ್ತ ಹಾವಲ್ಲ ಎನ್ನುವುದಕ್ಕೆ ಸಾಕ್ಷಿ! ಎಲ್ಲ

ಹಾವುಗಳನ್ನು ವಿಷಯುಕ್ತವೆಂದು ಪರಿಗಣಿಸುವ ನನ್ನಮ್ಮ, ನನ್ನನ್ನು ಹಾವಿರುವ ಜಾಡಿಯೊಂದಿಗೆ ಮನೆಯಿಂದ ಹೊರಹಾಕಿದ್ದಳು.

## ಸಂರಕ್ಷಣಾ ಕಾರ್ಯ ಆರಂಭಿಸುವ ಮುನ್ನ ಉರಗಗಳ ಬಗ್ಗೆ ಕಲಿಯಿರಿ:

ನಾನು ವಡೋದರದಲ್ಲಿ ಉರಗ ಸಂರಕ್ಷಕನಾಗಿ ಕೆಲಸವಾರಂಭಿಸಿದಾಗ ಸ್ನೇಹಾಲ್ ಭಟ್ ರವರು ಬೇರೆಬೇರೆ ಉರಗ ಜಾತಿಗಳನ್ನು ಗುರುತಿಸುವುದನ್ನು ಮೊದಲು ಕಲಿಸಿದರು. ಆ ಸ್ಥಳದಲ್ಲಿ ಕಾಣುವ ವಿಷಯುಕ್ತ ಹಾಗು ವಿಷವಲ್ಲದ ಹಾವುಗಳನ್ನು ಗುರುತಿಸುವುದನ್ನು ಕಲಿಯಲು ಸ್ವಲ್ಪ ಸಮಯ ತೆಗೆದುಕೊಂಡೆ. ನಾನು ಹಾವುಗಳನ್ನು ಸರಿಯಾಗಿ ಗುರುತಿಸುವುದನ್ನು ಕಲಿತಿದ್ದೇನೆ ಎಂಬುದು ಖಾತರಿಯಾಗುವವರೆಗೂ ಸ್ನೇಹಾಲ್ ಭಟ್ ರವರು ನಾನು ಹಾವುಗಳನ್ನು ಹಿಡಿಯದಂತೆ ನೋಡಿಕೊಂಡರು,

ಅದಕ್ಕೆ ಬದಲಾಗಿ ಹಾವಿನ ಡಬ್ಬಿಗಳನ್ನು ಸ್ವಚ್ಛಗೊಳಿಸಿ ಬಿಸಿಲಿನಲ್ಲಿ ಒಣಗಿಸುವ ಕೆಲಸವನ್ನು ನನಗೆ ನೀಡಿದರು. ನಿಮಗೆ ಹಾವುಗಳ ವಿಷಯದಲ್ಲಿ ಆಸಕ್ತಿ ಇದ್ದರೆ ಅವುಗಳನ್ನು ನೂರು ಪ್ರತಿಶತ ತಪ್ಪಿಲ್ಲದೇ ಗುರುತಿಸುವುದನ್ನ ಕಲಿತುಕೊಳ್ಳಿ. ಹಾವನ್ನು ಗುರುತಿಸುವುದಕ್ಕಾಗದೇ ಹೋದರೆ ಆ ಹಾವನ್ನು ಪ್ರಪಂಚದಲ್ಲೇ ಅತ್ಯಂತ ವಿಷಕಾರಿ ಹಾವು ಎಂದು ಪರಿಗಣಿಸಿ.




## ಉರಗ ಸಂರಕ್ಷಣೆಯ ಪ್ರಮುಖವಾದ ಸಾಧನಗಳು:

ನನ್ನ ಇನ್ನೊಂದು ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವೆ. ಹದಿನೈದು ವರ್ಷಗಳ ಹಿಂದೆ ವಡೋದರದಲ್ಲಿ ಕರೆಬಂದೆಡೆ ಹಾವುಗಳ ಸಂರಕ್ಷಣೆಗೆ ಹೊರಡುತ್ತಿದ್ದೆ. ಸಂರಕ್ಷಣಾ ಕರೆ ಬಂದಾಗ ಸಾಧಾರಣವಾಗಿ ಮೂಲ ಪರಿಕರಗಳಾದ ಹಾವಿನಕಡ್ಡಿ ಹಾಗೂ ಚೀಲಗಳನ್ನು ಎತ್ತಿಕೊಂಡು ಹೋಗುವಷ್ಟು ವ್ಯವಧಾನವಿರುತ್ತಿರಲಿಲ್ಲ.

ವಡೋದರದಲ್ಲಿ ಹೇರಳವಾಗಿ ನಾಗರಹಾವುಗಳು, ಕಟ್ಟುಹಾವುಗಳು, ಕೊಳಕಮಂಡಲಗಳು, ಗರಗಸ ಮಂಡಲ ಹಾವುಗಳಿದ್ದವು. ಇವುಗಳಲ್ಲಿ ಆಕ್ರಮಣಕಾರಿ ಸ್ವಭಾವ ಹೆಚ್ಚಿರುವುದರಿಂದ ಅವುಗಳನ್ನು ಸಂರಕ್ಷಿಸಲು ಬಹಳ ಸಮಯಬೇಕಾಗುತ್ತಿತ್ತು. ಸಂರಕ್ಷಣಾ ಸ್ಥಳ ತಲುಪಿದಮೇಲೆ ಸ್ಥಳೀಯರಲ್ಲಿ ಒಂದು ಸಣ್ಣ ಚೀಲವನ್ನೋ ಪ್ಲಾಸ್ಟಿಕ್ ಜಾಡಿಯನ್ನೋ ಕೇಳಿ ಪಡೆಯುತ್ತಿದ್ದೆ ಹಾಗೂ ಹಾವನ್ನು ಅದರೊಳಗೆ ಕಳಿಸಲು ಸುತ್ತಮುತ್ತ ಬಿದ್ದಿರಬಹುದಾದ

ಕಡ್ಡಿಯನ್ನು ಹುಡುಕುತ್ತಿದ್ದೆ. ಕೆಲವು ಬಾರಿ ಹಾವನ್ನು ಚೀಲದೊಳಗೆ ಸೇರಿಸುವಷ್ಟರಲ್ಲಿ ಅದು ಚೀಲದಲ್ಲಿದ್ದ ಸಣ್ಣ ತೂತುಗಳಿಂದ ಹೊರಗೆ ಬಂದುಬಿಡುತ್ತಿತ್ತು. ಕೊನೆಗೆ ಆರು ಅಡಿ ಉದ್ದದ ಒಂದು ಕಟ್ಟುಹಾವು ನನಗೆ ಪಾಠ ಕಲಿಸಿತು. ಮನೆಯ ಹಿತ್ತಲಿನಲ್ಲಿದ್ದ ಹಾವು ನನಗೆ ತೀವ್ರ ಪ್ರತಿರೋಧವನ್ನೊಡ್ಡಿತು ಹಾಗೂ ಚೀಲದೊಳಗೆ ಸೇರಿಸುವಷ್ಟರಲ್ಲಿ ಮೂರ್ನಾಲ್ಕು ಬಾರಿ ಇನ್ನೇನು ಕಚ್ಚೇಬಿಟ್ಟಿತು ಎನ್ನುವಂತಾಗಿತ್ತು. ಈ ಘಟನೆಯ ನಂತರ ಉದ್ದನೆಯ ಕೋಲು ಹಾಗು ಹಾವಿನ ಕೊಕ್ಕೆಗಳು ನನ್ನ ಮೋಟಾರುವಾಹನದ ಅವಿಭಾಜ್ಯ ಅಂಗಗಳಾಗಿಬಿಟ್ಟವು. ತಪ್ಪುಮಾಡಿ ಹಾನಿಯಾಗದೆ ಉಳಿಯುವುದು, ಸರಿಯಾದುದನ್ನು ಕಲಿಯಲು ಒದಗಿ ಬರುವ ಅವಕಾಶ. ನೀವುಕೂಡ ಹಾವಿನ ಸಂರಕ್ಷಣೆಗೆ ಹೊರಡುವಾಗ ಸೂಕ್ತ ಪರಿಕರಗಳನ್ನು ತೆಗೆದುಕೊಂಡುಹೋಗಿರಿ.



## ಡಿಸ್ಕವರಿ ನ್ಯಾಟ್ ಜಿಯೊ ಹೀರೊಗಳು ಸಂಪೂರ್ಣ ನಿಜವಲ್ಲ:

ಪ್ರಾಣಿಗಳು ಹಾವುಗಳು ಪರದೆಯ ಮೇಲೆ ನೋಡಿದಷ್ಟು ಸೌಮ್ಯಸ್ವಭಾವದ ಪ್ರಾಣಿಗಳಲ್ಲ, ವೀಡಿಯೋದ ಸಾಕಷ್ಟುಭಾಗಗಳನ್ನು ಸಂಸ್ಕರಿಸಿ ಪರದೆಯಮೇಲೆ ತೋರಿಸುತ್ತಾರೆ, ತೋರಿಸದೇ ಇರುವುದೇನೆಂದರೆ ಚಿತ್ರೀಕರಣದ ವೇಳೆ ಪರದೆಯ ಹಿಂದಿನ ತಯಾರಿ, ನಿರ್ಮಾಪಕ ವೃಂದದವರು ತಮಗಾಗಿ ದುಡಿಯುವ ಪ್ರಸ್ತುತ ಪಡಿಸುವವನ(anchor) ಸುರಕ್ಷತೆಗಾಗಿ ಪ್ರಥಮಚಿಕಿತ್ಸೆಯಿಂದ ಹಿಡಿದು, ನುರಿತ ತಜ್ಞವೈದ್ಯರು, ಔಷಧಿಗಳು, ಸಾರಿಗೆ ವ್ಯವಸ್ಥೆಯನ್ನು ಮಾಡಿರುತ್ತಾರೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಕ್ಷಣಮಾತ್ರದಲ್ಲಿ ಬೇಕೆಂದರೆ ಹೆಲಿಕಾಪ್ಟರ್ ಗಳನ್ನು ಕೂಡ ಬಳಸಿ, ಪ್ರಸ್ತುತಪಡಿಸುವವನ ಜೀವವನ್ನು ಕಾಪಾಡುತ್ತಾರೆ ಹಾಗು ಅವರ ಚಿಕಿತ್ಸಾ ವೆಚ್ಚಗಳನ್ನು ಸಂಪೂರ್ಣವಾಗಿ ಭರಿಸುತ್ತಾರೆ.

ನೀವು ಟಿ.ವಿ.,ಯಲ್ಲಿ ಡಿಸ್ಕವರಿ, ನ್ಯಾಟ್ ಜಿಯೊ ನೋಡಿ ಹಾವುಗಳ ಸಂರಕ್ಷಣೆಮಾಡಲು ನಿರ್ಧರಿಸಿದರೆ ಹುಷಾರಾಗಿರಿ, ಸೂಕ್ತ ಉಪಕರಣಗಳನ್ನು ಬಳಸಿ, ಟಿವಿಯಲ್ಲಿ ನೋಡಿದಂತೆ ಮಾಡಲು ಹೋಗಬೇಡಿ,

***ನೀವು ಯಾವ ಗಳಿಗೆಯನ್ನು ಅತ್ಯಂತ ಸುರಕ್ಷಿತ ಎಂದು ಪರಿಗಣಿಸುವಿರೋ ಅದೇ ವೇಳೆಯಲ್ಲಿ ಹಾವುಗಳು ಕಚ್ಚಲು ನಿರ್ಧರಿಸಿರುತ್ತವೆ.*** ಹಾವನ್ನು ಕಾಪಾಡಲು ಹೋದಾಗ ಯಾವುದೇ ನಾಟಕೀಯತೆಯೂ ಬೇಡ, ಹಾವನ್ನು ಕೈಯಲ್ಲಿ ಹಿಡಿದು ಪ್ರದರ್ಶಿಸುವುದು, ಚೀಲದಿಂದ ಹೊರಗೆ ತೆಗೆಯುವುದು ಮಾಡಬೇಡಿ, ಹೋದ ಕೆಲಸ ಹಾವನ್ನು

ರಕ್ಷಿಸುವುದು, ಮೊದಲು ಹಾವನ್ನು ಚೀಲದೊಳಗೆ/ ಜಾಡಿಯೊಳಗೆ ಬಂಧಿಸಿ, ನಂತರ ಸ್ಥಳೀಯರೊಂದಿಗೆ ಮಾತನಾಡಿ, ಸಾಧ್ಯವಾದರೆ ಹಾವನ್ನು ಅಲ್ಲೇ ಸುರಕ್ಷಿತ ಜಾಗದಲ್ಲಿ ಬಿಡಿ ಇಲ್ಲವೇ ಸುರಕ್ಷಿತ ಜಾಗಕ್ಕೆ ತೆಗೆದುಕೊಂಡುಹೋಗಿ.

ಎಲ್ಲ ಹಾವುಗಳನ್ನು ಸಂರಕ್ಷಿಸಬೇಕೆ? ಇದೊಂದು ಅತಿಕ್ಲಿಷ್ಟವಾದ ಪ್ರಶ್ನೆ. ನಾನು ಹಲವಾರುಕಡೆ ಸಾಕಷ್ಟು ಬಗೆಯ ಹಾವುಗಳನ್ನು ಹಿಡಿದಿದ್ದೇನೆ. ಈ ವಿಷಯದಲ್ಲಿ ವ್ಯಕ್ತಿಗತ ಸಂಬಂಧ(public relation) ಅತಿಮುಖ್ಯ. ಜನರೊಂದಿಗೆ ಮಾತನಾಡಿ, ವಿಷಕಾರಿಯಲ್ಲದ ಹಾವುಗಳು ಮರದ ಮೇಲಿರುವ ಹಕ್ಕಿಗಳಂತೆ ಏನೂ ಅಪಾಯವನ್ನುಂಟು ಮಾಡುವುದಿಲ್ಲ. ಬಿಡಿಸಿ ತಿಳಿ ಹೇಳಿ ಜನಸಂದಣಿಯ ನಡುವೆ ಕಾಪಾಡಿದ ವಿಷಕಾರಿ ಹಾವುಗಳನ್ನು ಅಲ್ಲೇಬಿಡುವುದು ಯಾವ ದೃಷ್ಟಿಯಲ್ಲೂ ಸುರಕ್ಷಿತವಲ್ಲ. ***ವಿಷಕಾರಿಯಲ್ಲದ ಹಾವುಗಳನ್ನು ಅವುಗಳು ದೊರಕಿದ ಸ್ಥಳಗಳಲ್ಲೇ ಬಿಡಬೇಕು ಇಲ್ಲದಿದ್ದರೆ ಅದರ ಸ್ಥಳಕ್ಕೆ ಮತ್ತೊಂದು ವಿಷಕಾರಿಹಾವು ಬಂದು ಸೇರಿಕೊಳ್ಳುವ ಸಂಭವವಿದೆ.***

## ಹಾವುಗಳು ಸಾಕುಪ್ರಾಣಿಗಳ ಸಾಲಿಗೆ ಸೇರುವುದಿಲ್ಲ:

ಹಾವುಗಳನ್ನು ಅಪಾಯಕರ ಜಾಗಗಳಿಂದ ಸಂರಕ್ಷಿಸಿ ಹಾಗೂ ಸುರಕ್ಷಿತ ಸ್ಥಳದಲ್ಲಿ ಆದಷ್ಟು ಬೇಗ ಬಿಟ್ಟುಬಿಡಿ. ಸುಮಾರು ಮೂರು ವರ್ಷಗಳ ಹಿಂದೆ ನನ್ನ ಉರಗ ಸಂರಕ್ಷಕ ಸ್ನೇಹಿತನನ್ನು ಭೇಟಿಯಾದೆ. ಅವರು ನನ್ನನ್ನು ಮನೆಗೆ ಕರೆದುಕೊಂಡು ಹೋದರು. ಅವರ ಮನೆಯಲ್ಲಿ ಆತ ಸಂರಕ್ಷಿಸಿದ ಹಾವುಗಳೆಲ್ಲವೂ ಪ್ಲಾಸ್ಟಿಕ್ ಜಾಡಿಯಲ್ಲಿ ಇದ್ದದು ನೋಡಿ ನನಗೆ ಅಘಾತವಾಯಿತು. ಏನೆಂದು ಕೇಳಿದಾಗ ಹಾವುಗಳ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಾಗಾರಕ್ಕೋಸ್ಕರ ಸಂಗ್ರಹಿಸಿರುವುದೆಂದೂ ಕಾರ್ಯಗಾರ ಮುಗಿದೊಡನೆ ಬಿಟ್ಟುಬಿಡುವುದಾಗಿ ತಿಳಿಸಿದರು.

ಸಂರಕ್ಷಿಸಿದ ಹಾವುಗಳನ್ನು IUCN(INTERNATIONAL UNION FOR CONSERVATION OF NATURE) ಮಾರ್ಗಸೂಚಿಯನ್ನು ಪಾಲಿಸಿ. ಒಂದು ನಗರಪ್ರದೇಶದಲ್ಲಿ ಹಲವಾರು ಹಾವುಗಳನ್ನು ಹಿಡಿದು ಅವುಗಳನ್ನು ಊರಾಚೆಯ ಒಂದೇ ಸ್ಥಳದಲ್ಲಿ ಬಿಡುವುದು ಪರಿಸರದ ಒಂದುದೊಡ್ಡ ದುರಂತ. ಸ್ಥಾನಪಲ್ಲಟವಾದ ಹಾವುಗಳು ಸ್ಥಳೀಯ ಹಾವುಗಳೊಂದಿಗೆ ಆಹಾರಕ್ಕಾಗಿ, ವಾಸ ಸ್ಥಳಕ್ಕಾಗಿ ಪೈಪೋಟಿಯನ್ನೊಡ್ಡುತ್ತವೆ ಹಾಗೂ ರೋಗಗ್ರಸ್ತವಾಗಿದ್ದರೆ ಸ್ಥಳೀಯ ಹಾವುಗಳು ಕೂಡ ರೋಗಗ್ರಸ್ತವಾಗುತ್ತವೆ.

## ಕಾನೂನು ಪಾಲಿಸಿ ಇಲ್ಲದಿದ್ದರೆ ಕಾನೂನು ರಕ್ಷಕರು ನಿಮ್ಮಹಿಂದೆ ಬೀಳುತ್ತಾರೆ:


ತುರ್ತು ಸಮಯದಲ್ಲಿ ಯಾವ ಪರವಾನಿಗೆಗಳಿಲ್ಲದೆ ಹಾವು, ಇನ್ಯಾವುದೇ ವನ್ಯಜೀವಿಯನ್ನು ಅಪಾಯದಿಂದ ಸಂರಕ್ಷಿಸಬಹುದು.ನಿಮ್ಮೊಂದಿಗೆ ಯಾವುದಾದರು ವನ್ಯಮೃಗವಿದ್ದರೆ ಸಮೀಪದ ಅರಣ್ಯಾಧಿಕಾರಿ ಕಛೇರಿಯನ್ನು 48

ಗಂಟೆಗಳೊಳಗೆ ಸಂಪರ್ಕಿಸಿ ಮಾಹಿತಿನೀಡಿ. ಸಾಧ್ಯವಾಗದಿದ್ದರೆ ಆರಕ್ಷಕ ಠಾಣೆಗೆ ಬರವಣಿಗೆಯಲ್ಲಿ ತಿಳಿಸಿ ಸ್ವೀಕೃತಿ ಧೃಡೀಕರಣವನ್ನು ಪಡೆದುಕೊಳ್ಳಿ. ವನ್ಯಪ್ರಾಣಿಗಳನ್ನು ನಿರ್ವಹಿಸುವ ಮೊದಲು ಸ್ಥಳೀಯ ಮುಖ್ಯ ಅರಣ್ಯಾಧಿಕಾರಿಯ ಅನುಮತಿ ಪಡೆದುಕೊಳ್ಳಿ. ಅನುಮತಿ ಇಲ್ಲದೆ ಹಾವುಗಳನ್ನು ಸಂರಕ್ಷಿಸುವುದು ಅಥವಾ ನಿರ್ವಹಿಸುವುದು ಕಾನೂನು ಬಾಹಿರ. ಎಲ್ಲಾ ಹಾವುಗಳು ಭಾರತೀಯ ಕಾನೂನಿನ ಬೇರೆ ಬೇರೆ ನಿಯಮಗಳಡಿ ಮೊದಲೇ ಸಂರಕ್ಷಿಸಲ್ಪಟ್ಟಿವೆ, ನಿಮ್ಮ ಪ್ರದೇಶದಲ್ಲಿ ಉರಗ ಸಂರಕ್ಷಣೆ ಮಾಡುವಿರೆಂದರೆ ಅದು ಕಾನೂನು ಪಾಲನೆಯ ಭಾಗವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅರಣ್ಯ ಇಲಾಖೆಯಿಂದ ಹಾವುಗಳನ್ನು ಸಂರಕ್ಷಿಸಲು ಮೊದಲು ಅಪ್ಪಣೆಯನ್ನು ಪಡೆದುಕೊಳ್ಳಿ..

ಹಾವುಗಳನ್ನು ಸಂರಕ್ಷಿಸುವುದು, ಜನಸಾಮಾನ್ಯರಿಗೆ ಹಾವುಗಳ ಬಗ್ಗೆ ತಿಳುವಳಿಕೆ ನೀಡುವುದು ಒಂದು ಸಮಾಜಮುಖಿಕಾರ್ಯ. ಇದು ಹಾವು ಹಾಗು ಮಾನವನ ನಡುವಿನ ಸಂಘರ್ಷವನ್ನು ಇಲ್ಲವಾಗಿಸುತ್ತದೆ ಹಾಗು ಇಬ್ಬರು ಕ್ಷೇಮವಾಗಿರುತ್ತಾರೆ. ಪ್ರತಿಯೊಂದು ಉರಗ ಸಂರಕ್ಷಣೆಯು ಸಂಪೂರ್ಣ ಮಾಹಿತಿ ತಿಳಿದುಕೊಂಡು ತರಬೇತಿ ಪಡೆದ ನಂತರವೇ ಜವಾಬ್ದಾರಿಯುತವಾಗಿ ಮಾಡಬೇಕಾದ ಕೆಲಸ. ಹಾವುಗಳು ಮನುಷ್ಯನಿಗೆ ಹೆದರುವುದೂ ಇಲ್ಲ ಹಾಗಂತ ಅವನಿಂದ ಹಾವುಗಳಿಗೆ ಪ್ರೀತಿಯೂ ಬೇಕಿಲ್ಲ, ಏಕೆಂದರೆ ಹಾವುಗಳಿಗೆ ಮನುಷ್ಯನ ಯಾವುದೇ ಭಾವನೆಗಳು ಅರ್ಥವಾಗುವುದಿಲ್ಲ. ಹಾಗಾಗಿ ಅದರ ಇರುವನ್ನು ಗೌರವಿಸಿ ಅವುಗಳ ಪಾಡಿಗೆ ಅವುಗಳನ್ನು ಬಿಡುವುದೇ ಅದಕ್ಕೆ ನಾವು ಮಾಡಲಾಗುವ ದೊಡ್ಡ ಉಪಕಾರ.

ಮೂಲ ಲೇಖನ: ಜೋಸ್ ಲೂಯಿಸ್

ಕನ್ನಡಕ್ಕೆ ಅನುವಾದ: ಡಾ. ದೀಪಕ್ ಭದ್ರಶೆಟ್ಟಿ





# ದುಂಬಿಗಳ ಬದಲಿಗೆ?

ಹೀಗೊಂದು ದಿನ, ನಾನು ಮತ್ತು ನನ್ನ ಸ್ನೇಹಿತರು ನಮ್ಮ ಪಾಡಿಗೆ ಆಟವಾಡುತ್ತ ನಮಗೆ ದೊರೆತಿದ್ದ 5 ನಿಮಿಷದ ವಿರಾಮವನ್ನು ಕಳೆಯುತ್ತಿದ್ದೆವು. ಆಗ ನನ್ನ 7ನೇ ತರಗತಿಯ ದಿನಗಳೆನಿಸುತ್ತದೆ. ಇರುವ ಸ್ವಲ್ಪ ಸಮಯವನ್ನು ವ್ಯರ್ಥ ಮಾಡಬಾರದೆಂದು ಆಟಕ್ಕಾಗಿಯೇ ಮುಡಿಪಾಗಿಟ್ಟು ಆಡುತ್ತಿದ್ದ ನಮ್ಮನ್ನು ತುಕ್ಕು(ಸ್ನೇಹಿತನ ಅಡ್ಡ ಹೆಸರು) ಬಂದು 'ಲೋ ಅಲ್ಲಿ ಜೇನು ಕಟ್ಟದೆ, ಬಾ ಹೋಗಿ ಕೀಳನ' ಎಂದು ಕರೆದನು. ಜೇನು ಸವಿಯಲು ಚೆನ್ನ, ಆದರೆ ಅದರ ಬಳಿ ಕಚ್ಚಿಸಿಕೊಂಡವರಿಗೆ ಉಳಿವಿದೆಯೇ? ಎಂದುಕೊಂಡು ನಾನು 'ಹೋಗೊಲೋ ಯಾವನಿಗ್ ಬೇಕು ಕಚ್ಚುಸ್ಕೊಂಡ್ರೆ ಅಷ್ಟೇ 2 ದಿನ ರಜ ಸ್ಕೂಲ್ ಗೆ!' ಎಂದೆ. ನನ್ನ ಈ ಮಾತುಗಳು ಮೊದಲೇ ಗ್ರಹಿಸಿದ ಅವನು ನಾನು ಮಾತು ಪೂರ್ಣ ಮಾಡುವ ಅರ್ಧದಲ್ಲೇ 'ಅದು ತುಡುವೆ ಜೇನು ಕಚ್ಚಲ್ಲ' ಎಂದೊಡನೆ ನನ್ನ ಸ್ನೇಹಿತರೆಲ್ಲ ಹೋ ಎಂದು ಕಾಲ್ಕಿತ್ತರು. ನಾನು ಮಾತ್ರ ಏನು ಮಾಡಲಿ? ನಾನೂ ಅವರೊಂದಿಗೆ ನಡೆದೆ.



ಮರದ ಮೇಲೆ ಒಂದು ಸಣ್ಣ ಕಡ್ಡಿಯಲ್ಲಿ ಕಟ್ಟಿದ್ದ ಜೇನಿಗೆ ಎಲ್ಲರು ಗುರಿಯಿಟ್ಟು ಕಲ್ಲಿನಿಂದ ಹೊಡೆಯಲಾರಂಭಿಸಿದರು. ಒಂದೆರೆಡು ಏಟು ಜೇನಿನ ರಾಡಿಗೆ ತಗುಲಿದೊಡನೆ ಹುಳುಗಳೆಲ್ಲ ಎದ್ದು ಸದ್ದು ಮಾಡಿದವು. ನಾನು ಮಾತ್ರ ಕಲ್ಲು ಹೊಡೆಯದೆ ಸುಮ್ಮನೆ ಮರದ ಕೆಳಗೆ ಕೈ ಚಾಚಿ ನಿಂತಿದ್ದೆ. ಅದೃಷ್ಟವೋ ಏನೋ, ಅಷ್ಟು ಜನ ಶ್ರಮಪಟ್ಟು ಬೆವರು ಹರಿಸಿ, ಕ್ರಿಕೆಟ್ ನಲ್ಲಿ ಕಲಿತಿದ್ದ ತಮ್ಮ ಪ್ರತಿಭೆಯನ್ನೆಲ್ಲಾ ಉಪಯೋಗಿಸಿ ಕಲ್ಲು ತೂರುತ್ತಿರುವಾಗ, ಯಾವುದೋ ಪುಣ್ಯವಂತ ಹೊಡೆದ ಕಲ್ಲು, ಜೇನು ಕಟ್ಟಿಗೆಗೆ ಯಾವುದೋ ಅದೃಷ್ಟ ಕೋನದಲ್ಲಿ ತಗುಲಿ ಕಡ್ಡಿ ಮತ್ತು ಜೇನು ನೇರ ನನ್ನ ಕೈಯಲ್ಲಿ ತೊಪ್ ಎಂದು ಬಿತ್ತು. ತಿಳಿಯಾಗಿದ್ದ ಜೇನು ಕೈಯಿಂದ ಮೆಲ್ಲನೆ ಜಾರುತ್ತಿತ್ತು. ಹಿಂದೆ ಸ್ನೇಹಿತರು ಇದ್ದುದು ನನಗೆ ನೆನಪಾಗಲೇ


ಇಲ್ಲ. ಯಾವುದೋ ಅತೀವ ಶಕ್ತಿ ನನ್ನಾವರಿಸಿ ನನ್ನ ಕೈ ಮತ್ತು ಬಾಯಿ ಸಂಭಂದವನ್ನು ಕ್ಷಣಾರ್ಧದಲ್ಲಿ ಬೆಸೆಯಿತು. ನನಗರಿಯದಂತೆ ನನ್ನ ನಾಲಿಗೆಯಲ್ಲಿ ಜೇನಿನ ಸವಿ ಈಜಾಡುತ್ತಿತ್ತು.

ಆದರೆ ಇದೆಲ್ಲ ನನ್ನ ಸ್ನೇಹಿತರಿಗೇನು ತಿಳಿಯಬೇಕು ಪಾಪ. ಅವರು ಒಂದೆರೆಡು ಕ್ಷಣ ಜೇನು ಮಣ್ಣಿನ ಪಾಲಾಯಿತೆಂದು ತಿಳಿದಿದ್ದರು. ಆದರೆ ಇಲ್ಲಿ ನಡೆದ ವಾಸ್ತವ ನೋಡಿದ ಮೇಲೆ ಅವರಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ನನಗೆ ಬೈಯುವಷ್ಟರಲ್ಲಿ ಇನ್ನೆಷ್ಟು ಜೇನು ಖಾಲಿಯಗುವುದೋ ಎಂದು ನನ್ನ ಕೈಯಲ್ಲಿ ಉಳಿದಿದ್ದ ಜೇನನ್ನು ಕಸಿದುಕೊಂಡು, ನನ್ನ ಕೈಯನ್ನೂ ಬಿಡದೆ ರುಚಿಸಿದರು.



ಆಗಿನ ವಯಸ್ಸಿನಲ್ಲಿ ಜೇನು ಹುಳುಗಳ ಮಹತ್ವ ನಮಗೆ ಸರಿಯಾಗಿ ತಿಳಿದಿರಲಿಲ್ಲ. ಸಾವಿರು ಮೈಲಿ ಸಾಗಿ ಮಕರಂದ ಹೀರಿ ಜೊತೆಗೆ ಪರಾಗಸ್ಪರ್ಶ ಮಾಡಿ ಲೆಕ್ಕವಿಲ್ಲದಷ್ಟು ಸಸ್ಯಪ್ರಬೇಧಗಳ ಪೀಳಿಗೆಯನ್ನು ಮುಂದೆ ಸಾಗಿಸುವಲ್ಲಿ ಜೇನು ಹುಳುಗಳದ್ದೇ ಪ್ರಮುಖ ಪಾತ್ರ. ಆದರೆ ಈಗಿನ ದುಸ್ಥಿತಿ ಹೇಗಿದೆಯೆಂದರೆ ಅಂತಹ ಜೇನು ಹುಳುಗಳ ಸಂಖ್ಯೆ ಈಗ ಗಂಭೀರವಾಗಿ ಕ್ಷೀಣಿಸುತ್ತಿದೆ. ಇದಕ್ಕೆ ಕೆಲವು ಕಾರಣಗಳೆಂದರೆ ವಾಯು ಮಾಲಿನ್ಯ, ವ್ಯವಸಾಯದಲ್ಲಿ ಕ್ರಿಮಿ ಮತ್ತು ಕೀಟನಾಶಕಗಳ ಅತೀವ ಬಳಕೆ ಮುಂತಾದವು. ಈ ವಿಷಯಗಳನ್ನು ಯಾವುದೋ ಟಿ.ವಿ. ಕಾರ್ಯಕ್ರಮದಲ್ಲಿ ಕಂಡ National Institute of Advanced Industrial Science and Technology in Tsukuba, Japan ನ ರಸಾಯನ ಶಾಸ್ತ್ರಜ್ಞ *ಐಜಿರೋ ಮಿಯಾಕೋ* (Eijiro Miyako) ನಾನು ಈ ಸಮಸ್ಯೆಗೆ ಪರಿಹಾರ ಹುಡುಕಬೇಕೆಂದು ಮನಸ್ಸು ಮಾಡಿದರು. ಹಾಗೆಯೇ ಕ್ಷೀಣಿಸುತ್ತಿರುವ ಪರಾಗಸ್ಪರ್ಷಕಗಳ ಸಮಸ್ಯೆಗೆ ಒಂದು ಪರಿಹಾರವನ್ನು ಸಹ ಕಂಡು ಹಿಡಿದರು.ಮಿಯಾಕೋ ಒಬ್ಬ ರಸಾಯನ ಶಾಸ್ತ್ರಜ್ಞ ಎಂಬುದು ನಿಮಗೆ ಈಗಾಗಲೇ ತಿಳಿದಿದೆ. ಇವರು ಒಂದು ಹೊಸ ಆವಿಷ್ಕಾರಕ್ಕೆ ಕೈ ಹಾಕಿದ್ದರು. ಅದೇನೆಂದರೆ *ವಿದ್ಯುತ್ ಚಲಿಸುವ ಅರೆ ಘನರೂಪ ದ್ರಾವಣ(Electricity conducting Gel)* ವನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿದ್ದರು. ಆದರೆ ಕಾರಣಾಂತರಗಳಿಂದ ಅವರ ಆವಿಷ್ಕಾರ ಸೋಲು ಕಂಡಿದ್ದರಿಂದ 2007 ರಲ್ಲಿ ಆ ದ್ರಾವಣವನ್ನು ಒಂದು ಜಾರ್ ನಲ್ಲಿ ಇರಿಸಿ ಮರೆತುಬಿಟ್ಟರು. ಇತ್ತೀಚೆಗೆ ತಮ್ಮ ಕೊಠಡಿಯನ್ನು ಶುಚಿಗೊಳಿಸುವಾಗ ಕೈ ತಗುಲಿ ಆ ಜಾರ್ ಕೆಳಗೆ

ಉರುಳಿ ಸಂಗೀತ ದನಿಯಲ್ಲಿ ಒಡೆಯಿತು. ಬಿದ್ದ ಜಾರ್ ಮತ್ತು ಜೆಲ್ ಅನ್ನು ಶುಚಿಗೊಳಿಸುವಾಗ ಆ ಜೆಲ್ ನ ಜೊತೆಗೆ ಕೆಲವು ದೂಳಿನ ಕಣಗಳು ಅಂಟಿಕೊಂಡಿದ್ದವು. ಅವರಿಗೆ ಒಂದು ಹೊಸ ಯೋಚನೆ ಹೊಳೆಯಿತು. ಈ ಅಂಟುವಿಕೆ ಪರಾಗ ಕಣಗಳು ಜೇನು ಹುಳುವಿನ ಮೈ ಕೂದಲಿಗೆ ಅಂಟುವ ರೀತಿಯಲ್ಲೇ ಇದೆ ಎಂದೆನಿಸಿತು. ಹಾಗಾದರೆ ಇದೇ ಜೆಲ್ ಉಪಯೋಗಿಸಿ ಕೃತಕ ಪರಾಗಸ್ಪರ್ಶ ಕ್ರಿಯೆ ಮಾಡಬಹುದೇ? ಎಂಬ ಆಲೋಚನೆ ಅವರ ತಲೆಯಲ್ಲಿ ಮೊಳಕೆಯೊಡೆಯಿತು. ತಾವು ತಯಾರಿಸಿದ್ದ 8 ವರ್ಷ ಹಳೆಯ ಜೆಲ್ ನ್ನು ಕೆಲವು ಇರುವೆಗಳ ಬೆನ್ನಿಗೆ ಸವರಿ ಹೂವುಗಳಿರುವ ಒಂದು ಪೆಟ್ಟಿಗೆಯಲ್ಲಿ ಬಿಟ್ಟರು. ಮೂರು ದಿನದ ಬಳಿಕ ಅವುಗಳ ಮೇಲೆ ಸವರಿದ್ದ ಜೆಲ್ ನಲ್ಲಿ ಪರಾಗ ಕಣಗಳು ಕಂಡು ಬಂದವು. ಇದನ್ನು ಕಂಡ ಮಿಯಾಕೋಗೆ ಆನಂದವೋ ಆನಂದ. ಆದರೆ ಈ ಜೆಲ್ ನ ಬಣ್ಣದಿಂದ ಬೇರೆ ಕೀಟಗಳು ಈ ಇರುವೆಗಳನ್ನು ಬೇಟೆಯಾಡಬಹುದು. ಜೇನು ಹುಳುಗಳಂತೆ ತಪ್ಪಿಸಿಕೊಳ್ಳಲು ಇವುಗಳಿಗೆ ಸೂಜಿ ಇಲ್ಲ. ಹಾಗಾಗಿ ತಮ್ಮ ರಸಾಯನ ಶಾಸ್ತ್ರದ ಜ್ಞಾನವನ್ನು ಉಪಯೋಗಿಸಿ ಆ ಜೆಲ್ ಗೆ ಇನ್ನು ನಾಲ್ಕು ಬಗೆಯ ರಾಸಾಯನಿಕಗಳನ್ನು ಸೇರಿಸಿ, ಸೂರ್ಯನ ಅತಿ ನೇರಳೆ ಕಿರಣಕ್ಕೆ ಆ ಜೆಲ್ ಸಹ ನೀಲಿ ಬಣ್ಣಕ್ಕೆ ತಿರುಗುವಂತೆ ತಯಾರಿಸಿದರು. ಅತಿ ನೇರಳೆ ಬಣ್ಣ ಬೀಳದಿದ್ದರೆ ಜೆಲ್ ಯಾವುದೇ ಬಣ್ಣ ಹೊಂದಿರುವುದಿಲ್ಲ. ಈ ಮಾರ್ಪಡಿಸಿದ ಜೆಲ್ ನನ್ನು ಈ ಬಾರಿ ಹಾರುವ ಕೀಟಗಳ ಮೇಲೆ ಪ್ರಯೋಗಿಸಿದರು. ತಕ್ಕ ಮಟ್ಟಿಗೆ ಇದು ಸಹ ಯಶಸ್ಸು ಕಂಡಿತು. ಆದರೆ ಅವರಿಗೆ ಈ ಕೀಟಗಳಂತೆ ಎಲ್ಲೆಂದರಲ್ಲಿ ಹಾರುವ ಬದಲಿಗೆ, ನಮ್ಮ ಕಪಿ ಮುಷ್ಟಿಯಲ್ಲಿಯೇ ಇಟ್ಟುಕೊಂಡು ಪರಾಗಸ್ಪರ್ಶ ಮಾಡಿಸಬೇಕೆನ್ನಿಸಿತು. ಆದರಿಂದಲೇ ಅವರು ಡ್ರೋನ್ ನ ಮೊರೆ ಹೋಗಿ ಸುಮರು 10 ಸಣ್ಣ ಡ್ರೋನ್ ಗಳನ್ನೂ ಖರೀದಿಸಿಬಿಟ್ಟರು.




ನಂತರ ಅವುಗಳನ್ನು ಹಾರಿಸುವುದನ್ನು ಕಷ್ಟಪಟ್ಟು ಕಲಿತು, ತಾವು ತಯಾರಿಸಿದ ಈ ಜೆಲ್, ಕುದುರೆ ಕೂದಲುಗಳನ್ನ ಡ್ರೋನ್ ನ ಕೆಳಭಾಗದಲ್ಲಿ ಅಳವಡಿಸಿದರು. ಆ ಕೂದಲುಗಳು ಜೇನು ಹುಳುಗಳ ಕೂದಲಿನಂತೆ ನೆಟ್ಟಗೆ ನಿಲ್ಲಿಸಲು ವಿದ್ಯುತ್ ನ್ನು ಬಳಸಿದರು ಹಾಗೆಯೇ ಪರಾಗಸ್ಪರ್ಶ ಮಾಡಿಸಿದರು. ಈ ಡ್ರೋನ್ ಗಳು ಮೊದಲಿಗೆ ಪರಾಗ ಕಣಗಳನ್ನು ತಮಗೆ ಅಂಟಿಸಿಕೊಂಡು ನಂತರ ಬೇರೊಂದು ಹೂವಿಗೆ ಹೋಗಿ ತಾಗಿಸುತ್ತಿದ್ದವು. ಈ ಕಾರ್ಯವು ಇವುಗಳ 2-3 ಪ್ರಯತ್ನದಲ್ಲೇ ಯಶಸ್ವಿಯಾಗುತ್ತಿದ್ದವು ಎಂಬುದು ಗಮನಾರ್ಹ.

ಈ ಡ್ರೋನ್ ಗಳನ್ನ ಇನ್ನು ಅಭಿವೃದ್ಧಿಪಡಿಸಿ ಇವುಗಳಿಗೆ ಜಿಪಿಎಸ್ (GPS) ಅಳವಡಿಸಿ ಮತ್ತು ಕೃತಕ ಬುದ್ಧಿಮತ್ತೆ(Artificial Intelligence)ಯ ಸಹಾಯದಿಂದ ಕಡಿಮೆಯಾಗುತ್ತಿರುವ ದುಂಬಿಗಳ ಸಂಖ್ಯೆಗೆ ತುರ್ತು ಚಿಕಿತ್ಸೆಯಾಗಬಹುದು ಎನ್ನುತ್ತಾರೆ.

ಆದರೆ ನನ್ನ ದೃಷ್ಟಿಯಲ್ಲಿ, ಈ ತರಹದ ಎಲ್ಲಾ ಉಪಕರಣ ಯುಕ್ತ ಪರಿಸರವನ್ನು ಕಟ್ಟುವುದು ಸರಿಯೇ? ದುಂಬಿಗಳ ಕ್ಷೀಣಿಸುತ್ತಿರುವ ಸಂಖ್ಯೆಗೆ ನಿಜವಾದ ಕಾರಣ ಹುಡುಕಿ ಸ್ವಾಭಾವಿಕವಾಗಿ ಅವುಗಳ ಸಂಖ್ಯೆ ಹೆಚ್ಚಿಸಲು ಸಾಧ್ಯವೇ ಇಲ್ಲವೇ? ಈ ಡ್ರೋನ್ ಗಳು ದುಂಬಿಗಳ ಬದಲಿಗೆ ಅವುಗಳ ಕಾರ್ಯಕ್ಷಮತೆಗೆ ತಕ್ಕಂತೆಯೇ ಕೆಲಸ ನಿರ್ವಹಿಸಬಲ್ಲವೇ? ಹಾಗಾದರೆ ಮನುಷ್ಯನ ಅಗತ್ಯತೆಗಳಿಗೆ ಅಥವಾ ತೊಂದರೆಗಳಿಗೆ ಹೊಸದಾಗಿ ರೂಪುಗೊಳ್ಳುತ್ತಿರುವ ಕೃತಕ ಬುದ್ಧಿಮತ್ತೆಯೇ ಪರಿಹಾರವೇ? ಯೋಚಿಸಿ ನೋಡಿ.! ಇಂತಹ ಪ್ರಶ್ನೆಗಳ ಹುಡುಕಾಟದಲ್ಲೇ ಉತ್ತರವಿದೆ ಎಂದು ನನಗನಿಸುತ್ತದೆ.

*The development of full artificial intelligence could spell the end of the human race…!*

*-Stephen Hawking*

*From an interview with the BBC, December 2014*

*ಡ್ರೋನ್ ನಿಂದ ಪರಾಗಸ್ಪರ್ಶ ವಿಡಿಯೋ*

*ನೋಡಲು QR CODE ಸ್ಕ್ಯಾನ್ ಮಾಡಿ*

-ಜೈಕುಮಾರ್ .ಆರ್



WORLD WILDLIFE DAY
3 MARCH

# ಅಡವಿಯಲ್ಲಿ ವಿಶ್ವ ವನ್ಯಜೀವಿ ದಿನಾಚರಣೆ.

ಪ್ರತಿ ವರ್ಷದ ಮಾರ್ಚ್ 3 ನೇ ದಿನಾಂಕವನ್ನು ಅಂತರರಾಷ್ಟ್ರೀಯ ವನ್ಯಜೀವಿಗಳ ದಿನವೆಂದು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ.

UNGA ಅಂತರರಾಷ್ಟ್ರೀಯ ಒಕ್ಕೂಟ. ಇದು ಅವನತಿಯ ಅಂಚಿನಲ್ಲಿ ಇರುವ ವನ್ಯಜೀವಿಗಳ ಪೂರ್ಣ ನಿರ್ನಾಮವನ್ನು ತಪ್ಪಿಸಲು ಮತ್ತು ಅವನತಿಯ ಜಾಡು ಹಿಡಿದಿರುವ ಜೀವಜಂತುಗಳ ಬಗ್ಗೆ ವಿಶ್ವದ ಜನರ ಗಮನಕ್ಕೆತಂದು, ಅರಿವು ಮೂಡಿಸಲು ಕಾರ್ಯೋನ್ಮುಖವಾಗಿರುವ ಒಂದು ಸಂಘಟನೆ. ಅದರಂತೆ ಈ ವರ್ಷವೂ ಅಳಿವಿನಂಚಿನಲ್ಲಿರುವ ದೊಡ್ಡ ಬೆಕ್ಕುಗಳು ಎಂಬ ಹಣೆಪಟ್ಟಿಯೊಂದಿಗೆ ಆಚರಿಸಲಾಗುತ್ತಿದೆ.

ಈ ಬಾರಿ 3/3/2018 ರಂದು ವಿಶ್ವ ವನ್ಯಜೀವಿ ದಿನವನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಕರ್ನಾಟಕ ಸರ್ಕಾರ ಇವರು WILDLIFE CONSERVATION GROUP ರವರ ಸಹಯೋಗದೊಂದಿಗೆ ಆಚರಿಸಿದರು.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಪಕ್ಕದಲ್ಲೇ ಬರುವ ತಟ್ಟೆಕೆರೆ ಮತ್ತು ಅರೆಕಡಕಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ಭಾಗವಹಿಸಿದ್ದರು. ಈ ಎರಡೂ ಶಾಲೆಗಳು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲೇ ಇರುವುದರಿಂದ, ಇಲ್ಲಿನ ಮಕ್ಕಳಿಗೆ ಕಾಡಿನ ಆಗು-ಹೋಗುಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಅವರನ್ನೇ ಆಯ್ಕೆ ಮಾಡಲಾಯಿತು. ಮಕ್ಕಳು ಮುಂಜಾನೆಯ ಉಪಹಾರ ಸೇವಿಸಿದ ನಂತರ ಅಡವಿ ಫೀಲ್ಡ್ ಸ್ಟೇಷನ್, ರಾಗಿಹಳ್ಳಿ ಯಲ್ಲಿ ಕಾರ್ಯಕ್ರಮವನ್ನು ಚಾಲನೆಗೊಳಿಸಲಾಯಿತು.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಬಗ್ಗೆ ಫಾರೆಸ್ಟರ್ ಮಹೇಶ್ ರವರು ಮಕ್ಕಳಿಗೆ ವಿವರಿಸಿದರು. ಮಕ್ಕಳಿಗೆ



ಹುಲಿ, ಚಿರತೆ, ಸಿಂಹಗಳ ಜೀವನ ಮತ್ತು ಭಾರತದಲ್ಲಿ ಅವುಗಳ ಸ್ಥಿತಿಯ ಬಗ್ಗೆ ವೀಡಿಯೋ ತೋರಿಸಲಾಯಿತು. ಜೊತೆಗೆ ಮಕ್ಕಳಿಗಾಗಿ ಪರಿಸರ ಚಟುವಟಿಕೆಗಳನ್ನು ಮಾಡಲಾಯಿತು.

RFO ಗಣೇಶ್ ರವರು ಮಕ್ಕಳೊಂದಿಗೆ ಬೆರೆತು ಸಂವಾದಿಸಿ ಪರಿಸರ ಕಾಡಿನ ರಕ್ಷಣೆಯ ಪ್ರಾಮುಖ್ಯತೆಯ ಬಗ್ಗೆ ತಿಳಿಸಿಕೊಟ್ಟರು. ಭಾರತದ ದೊಡ್ಡ ಬೆಕ್ಕುಗಳ ಬಗ್ಗೆ ತಿಳಿಸಿಕೊಟ್ಟರು.

WILDLIFE CONSERVATION GROUP ನ ಸದಸ್ಯರಾದ ಅಶ್ವಥ್ ಕೆ.ಎನ್ ಮತ್ತು ಜೈಕುಮಾರ್ ರವರು ದೃಶ್ಯಮಾಧ್ಯಮದ ಮೂಲಕ ಮಕ್ಕಳಿಗೆ ದೊಡ್ಡಬೆಕ್ಕುಗಳಾದ ಹುಲಿ, ಸಿಂಹ, ಹಿಮಚಿರತೆ, ಕಪ್ಪುಚಿರತೆ, ಚೀತಾಗಳ ಬಗ್ಗೆ ಮಾಹಿತಿ ನೀಡಿದರು. ಚೀತಾ ಏಕೆ ಭಾರತದಿಂದ ಅವನತಿ ಹೊಂದಿತು? ಹುಲಿ, ಚಿರತೆ, ಸಿಂಹ, ಕಪ್ಪುಚಿರತೆ, ಪೂಮಾ ಹಿಮಚಿರತೆ... ಇಂಥ ದೊಡ್ಡ ಬೆಕ್ಕುಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಇವುಗಳು ಕಡಿಮೆಯಾಗುತ್ತಿರುವುದಕ್ಕೆ ಮೂಲ ಕಾರಣಗಳು ಇಂತಿವೆ.



- ಮಾನವರು ನಡೆಸುತ್ತಿರುವ ಕಳ್ಳಬೇಟೆಯಿಂದ ದೊಡ್ಡ ಬೆಕ್ಕುಗಳಿಗೆ ಜಿಂಕೆಯಂತಹ ಬಲಿಪ್ರಾಣಿ ಸಿಗದೆ ಆಡು ಕುರಿ ತಿನ್ನಲು ಊರಿಗೆ ಬರುತ್ತದೆ.
- ತಮ್ಮ ಸಾಕುಪ್ರಾಣಿಗಳನ್ನು ಕೊಂದು ತಿನ್ನುತ್ತವೆ ಎಂದು ದೊಡ್ಡಬೆಕ್ಕುಗಳನ್ನು ಕೊಲ್ಲುತ್ತಾರೆ.
- ಕೃಷಿಗಾಗಿ, ಅಭಿವೃದ್ಧಿಗಾಗಿ ನೆಲದ ಮೂಲ ಸ್ವರೂಪವನ್ನೇ ಬದಲಿಸಿಬಿಟ್ಟಿರುವುದರಿಂದ ಬಲಿಪ್ರಾಣಿಗಳ ಸಂಖ್ಯೆ ಕುಗ್ಗಿದೆ.ನಾಡಿನಲ್ಲಿ ಮಾನವ-ಪ್ರಾಣಿ ಸಂಘರ್ಷ ಹೆಚ್ಚಿದೆ.

- ಈ ದೊಡ್ಡಬೆಕ್ಕುಗಳ ಚರ್ಮಕ್ಕೆ, ದೇಹದ ಇತರ ಭಾಗಗಳಿಗೆ ಚೀನಾ ಇತರೆ ದೇಶಗಳಲ್ಲಿ ಅಪಾರ ಬೇಡಿಕೆ ಇದೆ. ಇದಕ್ಕಾಗಿ ನಡೆಯುತ್ತಿರುವ ಕಳ್ಳಬೇಟೆ ದೊಡ್ಡಬೆಕ್ಕುಗಳ ಅವನತಿಗೆ ಮೂಲ ಎನ್ನಬಹುದು.
- ಕಾಳ್ಗಿಚ್ಚು, ಬದಲಾಗುತ್ತಿರುವ ಜಾಗತಿಕ ತಾಪಮಾನ ಎಲ್ಲವೂ ಸೇರಿ ದೊಡ್ಡಬೆಕ್ಕುಗಳು ಬದುಕಲು ಆವಾಸವೇ ಇಲ್ಲದಾಗುತ್ತಿವೆ. ಎಂದು ವಿವರಿಸಿದರು..



ಮಕ್ಕಳಿಗೆ ಜೀವಜಾಲದ ಬಗ್ಗೆ ಹಾಗು ಪರಿಸರದಲ್ಲಿ ಪ್ರಾಣಿಗಳ ನಡುವಿನ ಪರಸ್ಪರ ಅವಲಂಬನೆ ಬಗ್ಗೆ ಚಟುವಟಿಕೆ ಮೂಲಕ ತಿಳಿಸಿಕೊಡಲಾಯಿತು. ಎಲ್ಲಾ ಮಕ್ಕಳಿಗೆ ವಿಶ್ವವನ್ಯಜೀವಿ ದಿನದಲ್ಲಿ ಭಾಗವಹಿಸಿದಕ್ಕೆ ಪ್ರಮಾಣಪತ್ರವನ್ನು ನೀಡಲಾಯಿತು. ದೊಡ್ಡಬೆಕ್ಕುಗಳಂತಹ ಮಾಂಸಾಹಾರಿ ಪ್ರಾಣಿಗಳು ಬದುಕಬೇಕಾದರೆ ಸಸ್ಯಹಾರಿ ಪ್ರಾಣಿಗಳ ಉಳಿವು ಅಗತ್ಯ. ಪ್ರಾಣಿಗಳ ಉಳಿವಿಗೆ ಕಾಡಿನ ಉಳಿವು ಅಗತ್ಯ ಎಂದು ಮನವರಿಕೆ ಮಾಡಿಸಿ ತಮ್ಮ ಸುತ್ತಮುತ್ತಲಿನ ಕಾಡು ಮತ್ತು ನೀರಿನ ಮೂಲಗಳನ್ನು ಉಳಿಸಿಕೊಳ್ಳುವುದರ ಮಹತ್ವವನ್ನು ತಿಳಿಸಲಾಯಿತು.

## ಪ್ರತಿ ದಿನ ವನ್ಯಜೀವಿ ದಿನ

ವನ್ಯಜೀವಿಗಳಿಗೆ ತೊಂದರೆ ಕೊಡುತ್ತಿರುವವರು ನಾವೇ. ಅದನ್ನು ಕಡಿಮೆ ಮಾಡಬೇಕಾದವರೂ ನಾವೇ. ಆದರೆ ಪ್ರಾರಂಭಿಸುವುದು ಎಲ್ಲಿಂದ? ನಾನು ಒಬ್ಬ ಮಾಡಿದರೆ ಅದರ ಪರಿಣಾಮ ಏನು? ಎಂಬ ಪ್ರಶ್ನೆ ಸಹಜ. ಹನಿ ಹನಿ ಕೂಡಿದರೆ ಹಳ್ಳ. ತೆನೆ ತೆನೆ ಕೂಡಿದರೆ ಬಳ್ಳ!.ಯಾರಿಗೆ ಗೊತ್ತು. ನಾವು ಒಬ್ಬೊಬ್ಬರೂ ಪ್ರಜ್ಞಾಪೂರ್ವಕವಾಗಿ ತೆಗೆದುಕೊಂಡ ಪುಟ್ಟ ಪುಟ್ಟ ನಿರ್ಧಾರಗಳು ಸಾವಿರವಾಗಿ ಅಳಿವಿನಂಚಿನಲ್ಲಿ ಇರುವ ಜೀವಿಗಳಿಗೆ ವರವಾಗಬಹುದು.

**ವಿಶ್ವ ವನ್ಯಜೀವಿ ದಿನಾಚರಣೆಗೆ ನೀವೇನು ಮಾಡಬಹುದು?**

**ಇಂದೇ ಪ್ರಾರಂಭಿಸಿ**

- ಪರಿಸರಕ್ಕೆ ವನ್ಯಜೀವಿಗಳ ಮೇಲೆ ಕೆಟ್ಟ ಪರಿಣಾಮ ಬೀರದಂತೆ ಪರಿಸರಸ್ನೇಹಿಯಾಗಿ ಬದುಕಲು ಪ್ರಾರಂಭಿಸಿ.
- ಉದ್ಯಾನವನ, ಮೃಗಾಲಯ, ಸಸ್ಯತೋಟ, ಮತ್ಸ್ಯಾಲಯ, ಪಕ್ಷಿಧಾಮಗಳಿಗೆ ಭೇಟಿಕೊಡಿ.
- ಪ್ರಾಣಿ ಪಕ್ಷಿಗಳ ಚರ್ಮ, ಪುಕ್ಕ ಇತರೆ ಭಾಗಗಳಿಂದ ತಯಾರಿಸಿದ ಯಾವುದೇ ವಸ್ತುಗಳನ್ನು ಬಳಸಬೇಡಿ.
- ಸ್ವಯಂಸೇವಕರಾಗಿ: ಎಷ್ಟೋ ಬಾರಿ ನೀವು ಧನಸಹಾಯವನ್ನೇ ಮಾಡಬೇಕು ಎಂದೇನು ಇಲ್ಲ. ನಿಮ್ಮ ಬಿಡುವಿನ ವೇಳೆಯಲ್ಲಿ ವನ್ಯಜೀವಿಗಳ ಬಗ್ಗೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆ ಅಥವ ಮೃಗಾಲಯಗಳಲ್ಲಿ ಸ್ವಯಂಸೇವಕರಾಗಿ ನಿಮ್ಮ ಕಾಲವನ್ನು ಕೊಡಿ.
- ಜಾಗತಿಕವಾಗಿ ಯೋಚಿಸಿ ಸ್ಥಳಿಯವಾಗಿ ಕಾರ್ಯೋನ್ಮುಕರಾಗಿ. ನಿಮ್ಮ ಸುತ್ತ ಮುತ್ತಲಿನ ಕಾಡು, ಗಿಡ ಮರ ಹಳ್ಳ ಕೆರೆ, ಪ್ರಾಣಿ ಪಕ್ಷಿಗಳಿಗೆ ಉಂಟಾಗುತ್ತಿರುವ ತೊಂದರೆಯ ಬಗ್ಗೆ ತಿಳಿದುಕೊಳ್ಳಿ.
- ಧೈರ್ಯವಾಗಿ ಮಾತಾಡಿ: ನಿಮಗೆ ತಿಳಿದಿರುವ ಪರಿಸರ ಜ್ಞಾನವನ್ನು ನಿಮ್ಮ ಸ್ನೇಹಿತರೊಂದಿಗೆ ಕುಟುಂಬದೊಂದಿಗೆ ಮಾತಾಡಿ. ನಿಮಗೆ ತಿಳಿಯದ ವಿಷಯವನ್ನು ಪ್ರಶ್ನೆ ಮಾಡಿ ತಿಳಿದುಕೊಳ್ಳಿ.
- ಅಧಿಕಾರಿಗಳಿಗೆ ತಿಳಿಸಿ: ಕಳ್ಳಬೇಟೆ, ಮೀನುಶಿಕಾರಿ, ಮರಗಳ್ಳತನ ಇತರೆ ಪರಿಸರಕ್ಕೆ ಸಂಬಂಧಿಸಿದಂತಹ ಅಕ್ರಮಗಳನ್ನು ಅಧಿಕಾರಿಗಳ ಗಮನಕ್ಕೆ ತನ್ನಿ. ಶಿಳ್ಳೆಕಾರರು ಕೊಟ್ಟ ಮಾಹಿತಿ ಹಲವು ಬಾರಿ ನಶಿಸುತ್ತಿರುವ ಪ್ರಾಣಿಗಳ ರಕ್ಷಣೆಗೆ ವರದಾನವಾಗಬಲ್ಲವು.



-ಶಂಕರಪ್ಪ.ಕೆ.ಪಿ

# ಛಾಯೆಯ ಮಾಯೆ ಎಂದೇ...

ಕಪ್ಪು ಕತ್ತಲೆಯ ನೀಲಾಕಾಶವೆಂದೇ
ಹೊಳೆವ ಕಾಯವ ನಕ್ಷತ್ರವೆಂದೇ
ಮಿನುಗುವ ತಾರೆಯ ಕಣವೆಂದೇ
ವಿಶ್ವ ಛಾಯೆಯ ಮಾಯೆಯೆಂದೇ

ರವಿಯೇ ಸರ್ವಶಕ್ತನೆಂದೇ
ಅಂತರಿಕ್ಷವೇ ವಿಶಾಲವೆಂದೇ
ಜ್ಯೋತಿರ್ವರ್ಷಗಳೇ ಸಮೀಪವೆಂದೇ
ಮಹಾ ಛಾಯೆಯೊಳು ಎಲ್ಲವೂ ಮಾಯೆಯೆಂದೇ

ಅದೃಶ್ಯಯದ ಛಾಯೆಯ ಮಾಯೆಯೆಂದೇ
ವಸುಂಧರೆಯ ಛಾಯೆಯ ಇರುಳೆಂದೇ
ಮನುಕುಲಕೆ ಛಾಯೆಯೇ ವಿಸ್ಮಯವೆಂದೇ
ಗ್ರಹಣಗೋಚರವ ಮಾಯಾ ಛಾಯವೆಂದೇ

ಚಂದ್ರ ಛಾಯೆಯ ಕಾಳರಾತ್ರಿಯಂದೇ
ನಕ್ಷತ್ರ ಪುಂಜಕೆ ಕಪ್ಪುರಂಧ್ರವ ಛಾಯೆಯೆಂದೇ
ವಿಶ್ವದ ರಮ್ಯತೆ ಸೌಮ್ಯತೆಗೆ ಮಹಾಛಾಯೆಯೆಂದೇ
ಛಾಯೆಯ ಮಾಯೆಯೊಳಗೆಕಾಂತ ಶಕ್ತಿಯ ಸಮಾಗಮವೆಂದೇ


- ಕೃಷ್ಣ ನಾಯಕ್

# ಪ್ರಕೃತಿ ಬಿಂಬ



© ಅರವಿಂದ ರಂಗನಾಥ್

ನೋಡುವ ಕಣ್ಣುಳ್ಳ ಮನಕೆ ಈ ಜಗವೇ ಸೊಬಗು! ಸ್ವರ್ಗವೇ ಭೂಮಿಗೆ ಇಳಿದಂತಹ ಕಾಮನಬಿಲ್ಲಿನ ಬಣ್ಣದ ನಿಸರ್ಗ ಕಲಾಕೃತಿ ಈ ಕಾಡು . ಮಾನವ ಪ್ರಕೃತಿಯನ್ನು ಅದರ ಪಾಡಿಗೆ ಅದನ್ನು ಬಿಟ್ಟರೆ, ಅಲ್ಲೇ ಒಂದು ಅದ್ಭುತ ಕಲಾಕೃತಿ ತಯಾರಾಗುತ್ತದೆ. ಆಧುನಿಕ ಯುಗದಲ್ಲಿ ಮಾನವರಾದ ನಮ್ಮ ದುರಾಸೆಗೆ ಹರಿಯುವ ಝರಿ, ಹೊಂಬಣ್ಣದ ಮರ, ಖಗ ಮೃಗಗಳೆಲ್ಲ ಮಾಯವಾಗುತ್ತಿರುದು ದುರಂತ!



© ಅರವಿಂದ ರಂಗನಾಥ್

ನೀರು ಜೀವಿಗಳ ಜೀವ. ಈ ಭೂಮಿಯ ಮೇಲೆ ಮೋಡವಾಗಿ, ಹನಿಯಾಗಿ, ಝರಿಯಾಗಿ ಸರೋವರವಾಗಿ, ಸಾಗರವಾಗಿ, ಕೊರೆಯುವ ನೀರ್ಗಲ್ ಆಗಿ ಎಲ್ಲ ಭೌತಸ್ಥಿತಿಯಲ್ಲೂ ನೀರು ಇದೆ. ನೀರಿಲ್ಲದೆ ನಮಗೂ ಇತರೆ ಪ್ರಾಣಿಗಳಿಗೂ ಆಹಾರ ದೊರಕದು. ನಮ್ಮ ನಾಗರೀಕತೆಗಳು ಬೆಳೆದಿದ್ದು ಅಳಿದಿದ್ದು ನೀರಿನಿಂದಲೇ ಎಂದು ಇತಿಹಾಸ ಸಾರಿ ಸಾರಿ ಹೇಳುತ್ತಿದೆ. ಅದರೂ ನಾವು ನಮ್ಮ ಕೊಳೆ ಕಸವನ್ನು ಶುದ್ಧ ನೀರಿನ ಮೂಲಗಳಾದ ಕೆರೆ, ಹೊಳೆ, ನದಿ, ಸಮುದ್ರಕ್ಕೆ ಎಗ್ಗಿಲ್ಲದೆ ಸುರಿದು ಕಲುಷಿತ ಗೊಳಿಸುತ್ತಿರುವುದನ್ನು ಕಂಡಾಗ ಇತಿಹಾಸದಿಂದ ನಾವು ಬುದ್ಧಿ ಕಲಿತಂತೆ ಕಾಣದು!




ಗ್ರ್ಯಾನುಲಾರ್ ಪೊದೆ ಕಪ್ಪೆ © ವಿಪಿನ್ ಬಾಳಿಗ

ನಾನು ಪೊದೆಗಪ್ಪೆ. ಕರ್ನಾಟಕ ಮತ್ತು ಕೇರಳದ ಪಶ್ಚಿಮ ಘಟ್ಟದ ನಿತ್ಯಹರಿದ್ವರ್ಣ ಕಾಡೇ ನನ್ನ ಆವಾಸ ಸ್ಥಾನ. ಒಂದು ಇಂಚು ಉದ್ದವಿರುವ ನಾನು ಎತ್ತರದ ಪೊದೆಗಳಲ್ಲಿ, ಕಾಫಿತೋಟದ ಪೊದೆಗಳ ಮೇಲೆ ವಾಸಿಸುತ್ತೇನೆ. ನನ್ನ ಮೈ ಮೇಲೆ ಒರಟಾದ ಸಣ್ಣ ಸಣ್ಣ ಗ್ರಂತಿಗಳಿವೆ. ಏರುತ್ತಿರುವ ಜಾಗತಿಕ ತಾಪಮಾನಕ್ಕೆ ಇಲ್ಲಿ ಈಗ ಮಳೆಯೇ ಸರಿಯಾಗಿ ಬರುತ್ತಿಲ್ಲ. ಅದರಲ್ಲಿ ಬೆಳೆಗಳ ರಕ್ಷಣೆಗೆ ಮಾನವರು ಬಳಸುತ್ತಿರುವ ಕೀಟನಾಷಕಗಳು ನಮ್ಮ ಜೀವವನ್ನೂ ತೆಗೆಯುತ್ತಿವೆ. ನಾನು ಅವನತಿಯ ಅಂಚಿನಲ್ಲೇ ಜೀವ ಹಿಡಿದು ಬದುಕುತ್ತಿದ್ದೇನೆ.

-ಶಂಕರಪ್ಪ.ಕೆ.ಪಿ